**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿ.ಸಿ.ನಂ. 164/2026**

**ಫಿರ್ಯಾದುದಾರರು ಃ ಕ್ಯಾತನಹಳ್ಳಿ ಪೊಲೀಸರು**

**ವಿರುದ್ಧ**

**ಆರೋಪಿ ಃ ಶಿವಕುಮಾರ್ ಸಿ ವಾಸಃ ಬನ್ನಿಸ್ಟ್ರೀಟ್, ಹುಣಸೂರು ಟೌನ್, ಮೈಸೂರು ತಾಲ್ಲೂಕು.**

**ಆಪಾದನಾ ಸಾರಾಂಶ**

*ದಿನಾಂಕ 20.04.2026 ರಂದು ಮದ್ಯಾಹ್ನ 3.50 ಗಂಟೆ ಸಮಯದಲ್ಲಿ ಕ್ಯಾತನಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿ, ಬನ್ನಂಗಾಡಿ ಗ್ರಾಮದ ಕೆರೆಕೋಡಿ ಬಳಿ ಕೆ ಆರ್ ಪೇಟೆ ಕಡೆಯಿಂದ ಕೆ ಆರ್ ಎಸ್ ಮಾರ್ಗವಾಗಿ ಹಾದು ಹೋಗಿರುವ ಕೆ ಆರ್ ಪೇಟೆ ಮೈಸೂರು ರಸ್ತೆಯಲ್ಲಿ ಸಾಕ್ಷಿ.2 ರವರು ಕೆಎ-04/ಜೆಜೆ-8375 ಬಜಾಜ್ ಕೆ ಟಿ ಎಂ 200 ಮೋಟಾರ್ ಸೈಕಲನ್ನು ಕೆ ಆರ್ ಪೇಟೆ ಕಡೆಯಿಂದ ಮೈಸೂರು ಕಡೆಗೆ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಚಾಲನೆ ಮಾಡಿಕೊಂಡು ಮೈಸೂರು ಹೋಗಲು ಹೋಗುತ್ತಿರುವಾಗ ಆರೋಪಿಯಾದ ನೀವು ಸಾಕ್ಷಿ.5 ರವರ ಬಾಬ್ತು ಕೆಎ-13/ಡಿ-1898 ಮಹೀಂದ್ರ ಬೊಲೆರೋ ಜೀಪನ್ನು ಮೈಸೂರು ಕಡೆಯಿಂದ ಕೆ ಆರ್ ಪೇಟೆ ಕಡೆಗೆ ಮಾನವ ಜೀವಕ್ಕೆ ಅಪಾಯವಾಗುವ ರೀತಿ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಸಾಕ್ಷಿ.2 ರವರು ಚಾಲನೆ ಮಾಡುತ್ತಿದ್ದ ಮೋಟಾರ್ ಸೈಕಲ್ ಗೆ ಮುಖಾಮುಖಿ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿ* ***ಭಾರತೀಯ ನ್ಯಾಯ ಸಂಹಿತೆ ಕಲಂ 281 ರಡಿಯಲ್ಲಿ*** *ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.*

*ಅದೇ ದಿನ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ತಿಳಿಸಿದ ರೀತಿಯಲ್ಲಿ ಬೊಲೆರೋ ಜೀಪನ್ನು ಚಲಾಯಿಸಿ ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ.2 ರವರು*

ಬೈಕಿನ ಸಮೇತ ರಸ್ತೆಯ ಮೇಲೆ ಬಿದ್ದು ಅವರ ಬಲಮೊಣಕೈ, ಎಡಮುಂಗೈ, ಬಲಕೈನ ಉಂಗುರ ಬೆರಳು ಮತ್ತು ಕಿರು ಬೆರಳಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ **ಭಾರತೀಯ ನ್ಯಾಯ ಸಂಹಿತೆ ಕಲಂ 125(ಎ) ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ತಿಳಿಸಿದ ರೀತಿಯಲ್ಲಿ ಬೊಲೆರೋ ಜೀಪನ್ನು ಚಲಾಯಿಸಿ ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ.2 ರವರು ಬೈಕಿನ ಸಮೇತ ರಸ್ತೆಯ ಮೇಲೆ ಬಿದ್ದು ಅವರ ಬಲಮೊಣಕಾಲಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ **ಭಾರತೀಯ ನ್ಯಾಯ ಸಂಹಿತೆ ಕಲಂ 125(ಎ) ಮತ್ತು 125(ಬಿ) ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಪ್ರ 1 ಮೇಲೆ ಹೇಳಿದ ಆಪಾದನೆಯ ಸಾರಾಂಶ ನಿಮಗೆ ಅರ್ಥವಾಯಿತೆ?**

**ಉಃ**

**ಪ್ರ 2 ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷೆ ಇದೆಯೆ ?**

**ಉಃ**

**(ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ ಹೇಳಿ, ಅವರು ಸರಿಯೆಂದು ಒಪ್ಪಿದ ಮೇರೆಗೆ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.)**

ದಿಃ 10.07.2026
ಸ್ಥಳ ಃ ಪಾಂಡವಪುರ

(ಆರ್. ಮಹೇಶ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.